## ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಬಲ್ಕೀಸ್ ಬಾನು ಇವರು ನಿಯಮ-72 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆ ಕುರಿತು.

ವಿಷಯ:

ಶಿವಮೊಗ್ಗ ಜಿಲ್ಲೆಯಲ್ಲಿರುವ ಕುವೆಂಪು ವಿಶ್ವವಿದ್ಯಾನಿಲಯ ಹಾಗೂ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಕಳೆದ 5 ವರ್ಷಗಳಲ್ಲಿ 10ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಸ್ನಾತಕೋತ್ತರ ವಿಭಾಗಕ್ಕೆ ಪ್ರವೇಶ ಪಡೆದಿದ್ದು, ವಿಶ್ವವಿದ್ಯಾನಿಲಯದ ಆರ್ಥಿಕ ಹೊರೆ ತಗ್ಗಿಸುವ ನಿಟ್ಟಿನಲ್ಲಿ ಅಂತಹ ವಿಭಾಗಗಳಲ್ಲಿ ಸಮೀಕರಿಸಿ ಒಂದೇ ವಿಶ್ವವಿದ್ಯಾನಿಲಯದಲ್ಲಿ ಉಳಿಸಿಕೊಳ್ಳುವುದರ ಜೊತೆಗೆ ಅಗತ್ಯಕ್ಕಿಂತ ಹೆಚ್ಚಿರುವ ಉಪಕುಲಸಚಿವರ ಹುದ್ದೆಗಳನ್ನು ಸರ್ಕಾರ ಹಿಂದಕ್ಕೆ ಪಡೆದುಕೊಂಡು ಆ ಹುದ್ದೆಗಳನ್ನು ಅಗತ್ಯವಿರುವ ವಿಶ್ವವಿದ್ಯಾನಿಲಯಗಳಿಗೆ ವರ್ಗಾಯಿಸುವುದರ ಜೊತೆಗೆ ಸಾಕಷ್ಟು ಲೋಪದೋಷದಿಂದ ಕೂಡಿರುವ ಹಾಗೂ ಆರ್ಥಿಕ ಹೊರೆಯಾಗಿರುವ "ಡಿಜಿಟಲ್ ಮೌಲ್ಯಮಾಪನ" ಪದ್ಧತಿಯನ್ನು ರದ್ದುಪಡಿಸುವ ಕುರಿತು ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯಬಯಸುತ್ತೇನೆ.

### ಉತ್ತರ

ಕಳೆದ 05 ವರ್ಷಗಳಲ್ಲಿ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ.

| ವಿಭಾಗಗಳು/ಘಟಕ/ ಕೇಂದ್ರ | ಪ್ರವೇಶ ಮಿತಿ | ಪ್ರವೇಶಾತಿ | | | | |
|---|---|---|---|---|---|---|
| | | 2021-22 | 2022-23 | 2023-24 | 2024-25 | 2025-26 |
| ಹಿಂದಿ | 46 | 06 | 07 | 05 | 07 | 06 |
| ಪತ್ರಿಕೋದ್ಯಮ & ಸಮೂಹ ಸಂವಹನ | 43 | 13 | 22 | 16 | 21 | 09 |
| ಇ.ಎಸ್.ಆರ್.ಎಂ (ಭೂ ವಿಜ್ಞಾನ) | 42 | 37 | 29 | 30 | 09 | 15 |
| ಎಂ.ಆರ್.ಎಸ್.ಎ (ಭೂ ವಿಜ್ಞಾನ) | 42 | 17 | 21 | 12 | 06 | 10 |
| ಎಲೆಕ್ಟ್ರಾನಿಕ್ಸ್ | 42 | 26 | 08 | 14 | 21 | 07 |
| ಸಹ್ಯಾದ್ರಿ ಕಾಲೇಜು ಆವರಣ, ಶಿವಮೊಗ್ಗ | | | | | | |
| ಸಂಸ್ಕೃತ | 48 | 11 | 09 | 17 | 12 | 10 |
| ಉರ್ದು | 48 | 22 | 18 | 16 | 18 | 09 |
| ಸಹ್ಯಾದ್ರಿ ವಿಜ್ಞಾನ (ಘಟಕ) ಕಾಲೇಜು, ಶಿವಮೊಗ್ಗ | | | | | | |
| ಔದ್ಯೋಗಿಕ ರಸಾಯನಶಾಸ್ತ್ರ | 42 | 44 | 42 | 42 | 26 | 08 |
| ಸ್ನಾತಕೋತ್ತರ ಕೇಂದ್ರ, ಕಡೂರು | | | | | | |
| ಔಷಧೀಯ ರಸಾಯನಶಾಸ್ತ್ರ | 42 | 41 | 42 | 30 | 07 | 07 |
| ವಾಣಿಜ್ಯಶಾಸ್ತ್ರ | 54 | 32 | 17 | 20 | 14 | 08 |

..2

ದಾವಣಗೆರೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳಲ್ಲಿ 10ಕ್ಕಿಂತ ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳ ಪ್ರವೇಶಾತಿ ಇರುವುದಿಲ್ಲ.

ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಕನಿಷ್ಟ ದಾಖಲಾತಿ ನಿಗದಿಪಡಿಸುವ ಕುರಿತಂತೆ ವಿಶ್ವವಿದ್ಯಾಲಯಗಳಿಂದ ಯಾವುದೇ ಪ್ರಸ್ತಾವನೆಗಳು ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ಈ ಹಿನ್ನಲೆಯಲ್ಲಿ ವಿಶ್ವವಿದ್ಯಾನಿಲಯದ ಆರ್ಥಿಕ ಹೊರೆ ತಗ್ಗಿಸುವ ನಿಟ್ಟಿನಲ್ಲಿ ಅಂತಹ ವಿಭಾಗಗಳನ್ನು ಸಮೀಕರಿಸಿ ಒಂದೇ ವಿಶ್ವವಿದ್ಯಾನಿಲಯದಲ್ಲಿ ಉಳಿಸಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಕುವೆಂಪು ವಿಶ್ವವಿದ್ಯಾಲಯಕ್ಕೆ ಪರಿನಿಯಮದ ಮೂಲಕ 05 ಉಪ ಕುಲಸಚಿವರ ಹುದ್ದೆಗಳು ಮಾತ್ರ ಮಂಜೂರಾಗಿರುತ್ತವೆ. ಈ ಹುದ್ದೆಗಳು ವಿಶ್ವವಿದ್ಯಾಲಯದ ಶೈಕ್ಷಣಿಕ, ಸಂಶೋಧನೆ ಮತ್ತು ಆಡಳಿತಾತ್ಮಕ ಕಾರ್ಯಗಳನ್ನು ಸುಗಮವಾಗಿ ನಿರ್ವಹಣೆ ಮಾಡಲು ಕುವೆಂಪು ವಿಶ್ವವಿದ್ಯಾಲಯಕ್ಕೆ ಅತ್ಯಾವಶ್ಯಕವಾಗಿರುತ್ತವೆ. ಮುಂದುವರೆದು ಉಪಕುಲಸಚಿವ ಹುದ್ದೆಗಳನ್ನು ಬೇರೆ ವಿಶ್ವವಿದ್ಯಾಲಯಗಳಿಗೆ ವರ್ಗಾಯಿಸುವ ಪ್ರಸ್ತಾವನೆ ಇರುವುದಿಲ್ಲ.

ಕುವೆಂಪು ವಿಶ್ವವಿದ್ಯಾಲಯದಲ್ಲಿ "ಡಿಜಿಟಲ್ ಮೌಲ್ಯಮಾಪನ" ಪದ್ಧತಿಯನ್ನು ಅಳವಡಿಕೊಂಡ ನಂತರ ಡಾ : ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು, ಬೀದರ್ ವಿಶ್ವವಿದ್ಯಾಲಯ, ಬೀದರ್ ಹಾಗೂ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ ಈ ವಿಶ್ವವಿದ್ಯಾಲಯಗಳಲ್ಲಿ "ಡಿಜಿಟಲ್ ಮೌಲ್ಯಮಾಪನ" ಕಾರ್ಯವನ್ನು ಅಳವಡಿಕೊಳ್ಳಲಾಗಿದೆ.

2025-26ನೇ ಶೈಕ್ಷಣಿಕ ಸಾಲಿನಲ್ಲಿ "ಡಿಜಿಟಲ್ ಮೌಲ್ಯಮಾಪನ" ಪ್ರಗತಿಯಲ್ಲಿದ್ದು, ಯಾವುದೇ ನ್ಯೂನ್ಯತೆಗಳು, ದೂರುಗಳು ಬಂದಿರುವುದಿಲ್ಲ. ಈ ಹಿನ್ನಲೆಯಲ್ಲಿ "ಡಿಜಿಟಲ್ ಮೌಲ್ಯಮಾಪನ" ಪದ್ಧತಿಯನ್ನು ರದ್ದುಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ದಾವಣಗೆರೆ ವಿಶ್ವವಿದ್ಯಾಲಯದಲ್ಲಿ "ಡಿಜಿಟಲ್ ಮೌಲ್ಯಮಾಪನ" ಪದ್ಧತಿಯನ್ನು ಅಳವಡಿಸಿಕೊಂಡಿರುವುದಿಲ್ಲ.

ಸಂಖ್ಯೆ: ಇಡಿ 24 ಯುಎಸ್‌ವಿ 2026

(ಡಾ: ಎಂ.ಸಿ.ಸುಧಾಕರ್)
ಉನ್ನತ ಶಿಕ್ಷಣ ಸಚಿವರು